ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಜೇಷ್ಠತೆ ಆಧಾರದ ಮೇಲೆ ನಿಯಮಗಳನ್ನು ಪಾಲಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ರೈತರು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದು ಕೊಳ್ಳುತ್ತಿರುವುದರಿಂದ ಪರಿವರ್ತಕಗಳು ಸುಟ್ಟು ನಷ್ಟ ಉಂಟಾಗುವ ಸಾಧ್ಯತೆಗಳಿದ್ದು ಇದನ್ನು ತಪ್ಪಿಸಲು ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ಸರ್ಕಾರದಿಂದ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬನಹಟ್ಟಿ ನಗರದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸುವುದು

224 (600) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಬಕವಿ-ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಬೇಡಿಕೆ ಇದ್ದದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಆ) ಅಗ್ನಿಶಾಮಕ ಠಾಣೆಯನ್ನು ಹೊಸದಾಗಿ ಪ್ರಾರಂಭಿಸಲು ಇರುವ ನಿಯಮಾವಳಿಗಳೇನು;

ಇ) ತೇರದಾಳ ಮತಕ್ಷೇತ್ರದಲ್ಲಿ ಯಾವುದೇ ಅಗ್ನಿಶಾಮಕ ಠಾಣೆ ಇಲ್ಲದೇ ಇರುವುದರಿಂದ ಅನಾಹುತ ಸಂಭವಿಸಿದಲ್ಲಿ ಸುಮಾರು 50 ಕಿ.ಮೀಟರ್‌ದಿಂದ ಗಾಡಿ ಬರುವುದರ ಒಳಗಾಗಿ ಎಲ್ಲಾ ಸುಟ್ಟು ಭಸ್ಮವಾಗಿ ಹೋಗುವುದರಿಂದ ಇದು ಅವಶ್ಯಕವಾದುದಲ್ಲವೇ;

ಈ) ತೇರದಾಳ ಮತಕ್ಷೇತ್ರದಲ್ಲಿ ಒಂದು ಸ್ಪಿನ್ನಿಂಗ್ ಮಿಲ್ ಹಾಗೂ ಒಂದು ಸಕ್ಕರೆ ಕಾರ್ಖಾನೆ ಸುಮಾರು 10 ಸಾವಿರ ಪವರ್ ಲೂಮುಗಳಿದ್ದು, ಬಹಳ ಜರೂರ್ ಠಾಣೆ ಅವಶ್ಯಕತೆ ಇರುವುದು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಹೌದು.

ರಾಜ್ಯದಲ್ಲಿ ಬಾಕಿ ಇರುವ ಎಲ್ಲಾ 34 ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಆ) ಈ ಬಗ್ಗೆ ಯಾವುದೇ ನಿರ್ದಿಷ್ಟ ನಿಯಮಾವಳಿಗಳಿರುವುದಿಲ್ಲ.

ಆದರೆ, ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ Standing Fire Advisory Council ರವರು ನಿಗದಿಪಡಿಸಿರುವ ಮಾನದಂಡದಂತೆ ಪ್ರತೀ 50,000 ಜನಸಂಖ್ಯೆಗೆ ಒಂದು

ವಾಹನ ಹಾಗೂ ಪ್ರತೀ ಠಾಣೆಯಲ್ಲಿ ಕಡಿಮೆ ಪಕ್ಷ ಎರಡು ವಾಹನಗಳನ್ನು ಒದಗಿಸಬೇಕಾಗಿದೆ. ಕರ್ನಾಟಕದಲ್ಲಿ ಈ ಮಾನದಂಡವನ್ನು ಪ್ರಾಯೋಗಿಕವಾಗಿ ಅನುಸರಿಸಲು ಆಗದೆ ಇರುವುದರಿಂದ, ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿ ಕನಿಷ್ಠ 1 ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ತೇರದಾಳ ಮತಕ್ಷೇತ್ರದಿಂದ 25 ಕಿ.ಮೀಟರ್ ಅಂತರದಲ್ಲಿರುವ ಜಮಖಂಡಿ ಅಗ್ನಿಶಾಮಕ ಠಾಣೆಯಿಂದ ಅಗ್ನಿಶಾಮಕ ವಾಹನಗಳನ್ನು ವ್ಯವಸ್ಥಿಸಿ, ತೇರದಾಳ ಸುತ್ತಮುತ್ತ ಸಂಭವಿಸುವ ಅಗ್ನಿ ಅನಾಹುತಗಳನ್ನು ನಂದಿಸಲಾಗುತ್ತಿದೆ.

ಈ) ಪ್ರಶ್ನೆ (ಅ) ರಲ್ಲಿ ನೀಡಿರುವ ಉತ್ತರ ಈ ಪ್ರಶ್ನೆಗೂ ಅನ್ವಯಿಸುತ್ತದೆ.

ಗಂಗಾ ಕಲ್ಯಾಣ ಯೋಜನೆಯ ಪಂಪ್‌ಸೆಟ್‌ಗಳ ಗುಣಮಟ್ಟ ಪರೀಕ್ಷೆಯ ದಕ್ಷತೆ

225 (601) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾ ಕಲ್ಯಾಣ ಯೋಜನೆಯಲ್ಲಿ ಪೂರೈಕೆ ಆಗುವ ಪಂಪ್‌ಸೆಟ್‌ಗಳ ಮತ್ತು ಸಲಕರಣೆಗಳ ಗುಣಮಟ್ಟದ ಪರೀಕ್ಷೆ ನಡೆಸಲಾಗುವುದೇ;

ಆ) ಗುಣಮಟ್ಟ ಪರೀಕ್ಷೆ ಮಾಡುವಂತಹ ಕಂಪನಿಗಳ ಅರ್ಹತೆ ಏನು; ಯಾವ ಏಜೆನ್ಸಿಗಳಿಗೆ ಇಲ್ಲಿಯವರೆಗೆ ಗುಣಮಟ್ಟ ಪರೀಕ್ಷೆ ಮಾಡಲು ಆದೇಶ ಕೊಡಲಾಗಿದೆ;

ಇ) ಇವುಗಳಲ್ಲಿ ಕೈಗಾರಿಕಾ ಇಲಾಖೆಯಿಂದ ಜಿ.ಕ್ಯೂ.ಐ.ಸಿ. ಎಂಬ ಪರೀಕ್ಷಾ ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸಲು ಆದೇಶ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಯಾವ ಕ್ರಮ ಜರುಗಿಸಲಾಗಿದೆ;

ಈ) ಕಳೆದ ಟೆಂಡರ್ ಅಂದರೆ ಗಂಗಾ ಕಲ್ಯಾಣದಲ್ಲಿ ಪೂರೈಸುವ ಪಂಪ್‌ಸೆಟ್‌ಗಳು ಶೇಕಡ 50 ಮಾರುಕಟ್ಟೆಯಲ್ಲಿ ಮಾರಾಟವಿರಬೇಕು ಅನ್ನುವಂತಹ ಷರತ್ತನ್ನು ಕೈಬಿಡಲು ಕಾರಣಗಳೇನು

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) ಹೌದು.

ಆ) 3ನೇ ತಪಾಸಣಾ ಸಂಸ್ಥೆಗಳಾಗಿ ಕೆಲಸ ನಿರ್ವಹಿಸಿದ ಅನುಭವವಿರಬೇಕು ಹಾಗೂ ನುರಿತ ತಾಂತ್ರಿಕ ಸಿಬ್ಬಂದಿ ಹೊಂದಿರಬೇಕು. ಗುಣಮಟ್ಟ ಪರೀಕ್ಷೆ ಮಾಡಲು ಭಾರತ ಸರ್ಕಾರದ ಸಂಸ್ಥೆಗಳಾದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್), ಡೈರೆಕ್ಟೋರೇಟ್